ಸ್ವಾಮಿ ವಿವಿದಿಶಾನಂದ (೧೮೯೩-೧೯೯೦)

ಮೂಲ ಬಂಗಾಳಿ: **ಸ್ವಾಮಿ ಚೇತನಾನಂದ**

ಅನುವಾದ: **ಕುಮಾರಿ ಪಿ. ಉಷಾ**

ಸ್ವಾಮಿ ವಿವಿದಿಶಾನಂದರು ಸ್ವಾಮಿ ಬ್ರಹ್ಮಾನಂದರಿಂದ ಮಂತ್ರದೀಕ್ಷೆ ಪಡೆದ ಶಿಷ್ಯರು. ೧೯೧೯ರಲ್ಲಿ ಭುವನೇಶ್ವರ ಮಠವನ್ನು ಸೇರಿದ ಅವರು ೧೯೨೩ನೆ ಇಸವಿಯಲ್ಲಿ ಸ್ವಾಮಿ ಶಿವಾನಂದರಿಂದ ಸಂನ್ಯಾಸ ದೀಕ್ಷೆ ಪಡೆದರು. ಅವರ ಅಣ್ಣ ಸ್ವಾಮಿ ಆತ್ಮಬೋಧಾನಂದರು (ಸತ್ಯೇನ್ ಮಹಾರಾಜ್) 'ಉದ್ಬೋಧನ'ದ ಅಧ್ಯಕ್ಷರಾಗಿದ್ದರು. ೧೯೫೦ರಿಂದ ನನಗೆ ಅವರ ಪರಿಚಯವಿತ್ತು. ಅವರು ವಿಶಾಲ ಹೃದಯಿಗಳು. ವಿದ್ವಾಂಸ ಸಾಧುಗಳಾಗಿದ್ದ ಅವರು 'ಪ್ರಬುದ್ಧ ಭಾರತ' ಪತ್ರಿಕೆಯ ಸಂಪಾದಕರಾಗಿದ್ದರು. ೧೯೨೮ರಲ್ಲಿ ಅಮೆರಿಕಕ್ಕೆ ಹೋಗಿ ಮೊದಲಿಗೆ ಸ್ಯಾನ್‌ಫ್ರಾನ್ಸಿಸ್ಕೊ ಹಾಗೂ ಆನಂತರ ಸಿಯಾಟೆಲ್ ಕೇಂದ್ರಗಳ ಅಧ್ಯಕ್ಷರಾಗಿದ್ದರು.

೧೯೭೨ರಲ್ಲಿ 'Olema Women's Retreat'ಉದ್ಘಾಟನೆಯಾದಾಗ ನಾನವರನ್ನು ಮೊದಲ ಬಾರಿ ಭೇಟಿಯಾದೆ. ೧೯೭೩ರಲ್ಲಿ ಠಾಕೂರರ ಜಯಂತಿಯಲ್ಲಿ ಭಾಷಣ ಮಾಡಲು ಅವರೇ ನನ್ನನ್ನು ಆಮಂತ್ರಿಸಿದರು. ನಾನು ಫೋನ್‌ನಲ್ಲಿ ಅವರಿಗೆ ಹೇಳಿದೆ, 'ಮಹಾರಾಜ್, ನಾನು ಸಿಯಾಟೆಲ್‌ಗೆ ಬರುವೆ, ಆದರೆ ಒಂದು ಶರತ್ತಿನ ಮೇಲೆ!' ಶರತ್ತು ಏನೆಂದು ಅವರು ತಿಳಿಯಲಿಚ್ಛಿಸಿದಾಗ ನಾನೆಂದೆ, 'ಸ್ವಾಮೀಜಿ ತಮ್ಮ ಹಡಗಿನಿಂದ (Empress of India) ಇಳಿದ ಸ್ಥಳ Vancouverಗೆ ನನ್ನನ್ನು ಕರೆದುಕೊಂಡು ಹೋಗಬೇಕು'. ಸಿಯಾಟೆಲ್‌ನಿಂದ ವ್ಯಾಂಕೋವರ್ ೧೨೦ ಮೈಲು ದೂರದಲ್ಲಿದೆ.

೧೯೭೩ರ ಏಪ್ರಿಲ್ ತಿಂಗಳಿನಲ್ಲಿ ನಾನು ಸಿಯಾಟೆಲ್‌ಗೆ ಹೋದೆ. ಠಾಕೂರರ ಜಯಂತಿಯಲ್ಲಿ ಮಾತನಾಡಿದ ಮರುದಿನ ಅವರು ನನ್ನನ್ನು ವ್ಯಾಂಕೋವರ್‌ಗೆ ಕರೆದೊಯ್ದರು. ಅಲ್ಲೆಲ್ಲ ಸುತ್ತಾಡಿದೆ. ದಿನವೆಲ್ಲ ಅಲ್ಲಿ ಕಳೆದು ರಾತ್ರಿ ಸಿಯಾಟೆಲ್‌ಗೆ ಹಿಂದಿರುಗಿದೆ. ನಂತರ 'ವಿವೇಕಾನಂದ: ಬಾಂಬೆಯಿಂದ ವ್ಯಾಂಕೋವರ್ ವರೆಗೆ' ಎಂಬ ಲೇಖನವನ್ನು ಬರೆದೆ. ಸ್ವಾಮಿಗಳು ಚೆನ್ನಾಗಿ ಉಣಬಲ್ಲವರಾಗಿದ್ದರು; ಗಾಡಿಯಲ್ಲಿ ಕುಳಿತೊಡನೆಯೆ ನಿದ್ರೆ ಹೋಗುತ್ತಿದ್ದರು. ಮಕ್ಕಳಂತೆ ಸರಳರಾಗಿದ್ದರು. ಅವರ ಬಾತ್ ರೂಂನಲ್ಲಿ ಅನೇಕ ಆಟಿಕೆಗಳೂ, ಗೊಂಬೆಗಳೂ ಇದ್ದವು.

ಅವರು ದೇವರಮನೆಗೆ ಹೋಗಿದ್ದಾಗ ನಾನು ಹಿಂದಿನ ಸಾಲಿನಲ್ಲಿ ಕುಳಿತು ಅವರೇನು ಮಾಡುತ್ತಾರೆಂದು ಗಮನಿಸುತ್ತಿದ್ದೆ. ಅವರು ಮೊದಲು ಧೂಪಾರತಿ ಎತ್ತಿ ನಂತರ ಜಪ ಮಾಡುತ್ತಿದ್ದರು. ನಂತರ ಧ್ಯಾನ ಮಾಡಿ ಅನೇಕ ದೇವದೇವಿಯರ ಸ್ತುತಿಗಳನ್ನು ಕಣ್ಣುಮುಚ್ಚಿ ಸ್ತುತಿಸುತ್ತಿದ್ದರು. ಅವರ ದೃಷ್ಟಿ ಶಕ್ತಿ ಕಡಿಮೆಯಾಗಿತ್ತು. ಅವರ ಸೆಕ್ರೆಟರಿ ಕಾನ್‌ಸ್ಟೆಂಟ್ ಅವರಿಗೆ ಓದಿ ಹೇಳುತ್ತಿದ್ದರು.

ನಾನೊಂದು ದಿನ ಅವರನ್ನು ಕೇಳಿದೆ, ''ಮಹಾರಾಜ್, ದೀಕ್ಷೆ ನೀಡುವಾಗ ಸ್ವಾಮಿ ಬ್ರಹ್ಮಾನಂದರು ನಿಮಗೇನು ಉಪದೇಶ ನೀಡಿದ್ದರು?'' ಪ್ರಶ್ನೆಯನ್ನು ಕೇಳಿ ಅವರ ಮುಖ ಅರಳಿತು. ''ನೋಡು, ಪೂಜೆ-ಪಠಣ-ಜಪ-ಧ್ಯಾನ-ಈ ನಾಲ್ಕನ್ನು ಮಾಡಿದರೆ ನಿನ್ನ ಆಧ್ಯಾತ್ಮಿಕ ಜೀವನ ನೀರಸವಾಗಿರುವುದಿಲ್ಲ ಎಂದು ಮಹಾರಾಜರು ಹೇಳಿದ್ದರು. ಆದ್ದರಿಂದ ನನ್ನ ಗುರುಗಳ ಉಪದೇಶ ಪಾಲಿಸುತ್ತೇನೆ.'' ಅವರ ಮಾತಿನಿಂದ ನಾನು ಮುಗ್ಧನಾದೆ. ಈ ವೃದ್ಧ ಸಾಧುಗಳು ೫೩ ವರ್ಷಗಳ ಹಿಂದೆ ತಮ್ಮ ಗುರುಗಳು ನೀಡಿದ ಉಪದೇಶವನ್ನು ಪಾಲಿಸುತ್ತಿರುವರು. ಅಂಥ ಗುರುಭಕ್ತಿಯೇ ಧನ್ಯ !

ನಂತರ ಅವರು ನನಗೊಂದು ಉಪಹಾರವನ್ನು ನೀಡಲೆಂದು shopping mallಗೆ ಕರೆದುಕೊಂಡು ಹೋಗಿ ಒಂದು ಜ್ಯಾಕೆಟ್ ಕೊಡಿಸಿದರು. ''ನಮ್ಮ ಆಶ್ರಮದ ಯಾವುದೇ ಸಾಧುಗಳು ಬಂದರೆ ನಾನೊಂದು ಉಡುಗೊರೆ ಕೊಡುತ್ತೇನೆ'' ಎಂದರು.

ಒಂದೆರಡು ವರ್ಷಗಳಲ್ಲೇ ಅವರಿಗೆ ಹೃದಯಾಘಾತವಾಗಿ ಸುಮಾರು ೩-೪ ವರ್ಷಗಳು ಕೋಮಾದಲ್ಲಿದ್ದರು. ಅವರ ಶಿಷ್ಯಂದಿರು ಆಶ್ರಮದಲ್ಲಿ ಅವರ ಶುಶ್ರೂಷೆ ಮಾಡಿದರು. ೧೯೭೮ರ ಫೆಬ್ರವರಿಯಲ್ಲಿ ನಾನು ಅವರನ್ನು ಕಾಣಲು ಹೋದೆ. ೧೯೮೦ರ ಸೆಪ್ಟೆಂಬರ್‌ನಲ್ಲಿ ಅವರು ದೇಹತ್ಯಾಗ ಮಾಡಿದರು. ಬಳಿಕ ಅವರ ಸ್ಮಾರಕ ಸಭೆಯಲ್ಲಿ ಭಾಗವಹಿಸಲು ಹೋಗಿದ್ದೆ. ಅವರು ತಮ್ಮ ಜೀವಿತದ ಕೊನೆಯವರೆಗೂ ರಾಮಕೃಷ್ಣ ಸಂಘದ ಸೇವೆಯನ್ನು ಮಾಡಿದರು. ✸